ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	248
ಸದಸ್ಯರ ಹೆಸರು	:	ಡಾ|| ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	:	14.09.2021
ಉತ್ತರಿಸುವವರು	:	ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕಲಬುರ್ಗಿ ಜಿಲ್ಲೆ ಸೇಡಂ ಪಟ್ಟಣದಲ್ಲಿರುವ ವಾಸವದತ್ತಾ ಸಿಮೆಂಟ್ ಕಂಪನಿ ಕೈಗೊಳ್ಳುವ ಬ್ಲಾಸ್ಟಿಂಗ್ ನಿಂದ ಪಕ್ಕದ ಇಂಜಿಪಲ್ಲಿ ಗ್ರಾಮದ ಮನೆಗಳು ಬಿರುಕು ಬಿಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?	ಹೌದು.
ಆ)	ಜೀವ ಭಯದಿಂದ ದಿನ ಕಳೆಯುತ್ತಿರುವ ಗ್ರಾಮದ ಜನರುಗಳಿಗೆ ಪುನರ್ ವಸತಿ ಕ್ರಮ ಕೈಗೊಳ್ಳಲು ವಾಸವದತ್ತಾ ಸಿಮೆಂಟ್ ಕಂಪನಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆಯೇ;	ಹೌದು.
ಇ)	ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಇಂಜಿಪಲ್ಲಿ ಗ್ರಾಮದ ನಿವಾಸಿಗಳಿಗೆ ಪುನರ್ ವಸತಿ ಕ್ರಮ ಕೈಗೊಳ್ಳಬೇಕೆಂದು ಕಂಪನಿಯ ಪ್ರತಿನಿಧಿಯೊಂದಿಗೆ ಸಭೆ ನಡೆಸಿ, ನಿರ್ಣಯ ಕೈಗೊಂಡರೂ ಇನ್ನು ಜಾರಿಗೊಳಿಸದಿರಲು ಕಾರಣಗಳೇನು?	2006 ರಲ್ಲಿ ಪರಿಸರ ತೀರುವಳಿ ಪತ್ರಕ್ಕಾಗಿ ನಡೆದ ಸಾರ್ವಜನಿಕ ವಿಚಾರಣೆ ಸಭೆಯಲ್ಲಿ ತೀರ್ಮಾನಿಸಿರುವಂತೆ, ಸ್ಥಳೀಯರ ಪುನರ್ ವಸತಿಗಾಗಿ 6.23 ಎಕರೆ ಜಮೀನು ಖರೀದಿಸಲಾಗಿದೆ. ಆದರೆ ಗ್ರಾಮಸ್ಥರು ಸದರಿ ಪ್ರದೇಶಕ್ಕೆ ತೆರಳಲು ಇಚ್ಛಿಸದ ಕಾರಣ ಈ ಜಮೀನನ್ನು ಸರ್ಕಾರಕ್ಕೆ ವಹಿಸಿ ಪ್ರವಾಹ ಪೀಡಿತರ ವಸತಿಗಾಗಿ ಮತ್ತು ಸ್ಮಶಾನಕ್ಕಾಗಿ ಬಳಸಲು ಕಂಪನಿಯು ಬಿಟ್ಟುಕೊಟ್ಟಿರುತ್ತದೆ. ತದನಂತರ, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ತೀರ್ಮಾನದಂತೆ 2007-08ನೇ ಸಾಲಿನಲ್ಲಿ ವಾಸವದತ್ತಾ ಸಿಮೆಂಟ್ ಕಂಪನಿಯವರು ಇಂಜಿಪಲ್ಲಿ ಗ್ರಾಮದ 51 ಕುಟುಂಬಗಳಿಗೆ, ಅವರ ಸ್ವ-ಇಚ್ಛೆಯಂತೆ ನಗದು ರೂಪದಲ್ಲಿ ಪೂರ್ಣ ಪ್ರಮಾಣದ ಪರಿಹಾರವನ್ನು ಪಾವತಿಸಿರುತ್ತಾರೆ. ಬಾಕಿ ಉಳಿದ 81 ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸುವ ಸಂಬಂಧ ಕಂಪನಿಯು 5.21 ಎಕರೆ ಜಮೀನನ್ನು ಖರೀದಿಸಿದ್ದು, ಪುನರ್ ವಸತಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ಸಂಖ್ಯೆ: ಸಿಐ 89 ಸಿಎಂಸಿ 2021

Halappa BA

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ
ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು